ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಹಳದಿ ಪಡಿತರ ಕಾರ್ಡುಗಳ ವಿತರಣೆ

404(3986) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಎಷ್ಟು ಜನರಿಗೆ ಎ.ಪಿ.ಎಲ್. ಹಾಗೂ ಹಳದಿ ಪಡಿತರ ಚೀಟಿಗಳನ್ನು ಹಂಚಲಾಗಿದೆ?

ಆ) ಈ ವಿಧಾನ ಸಭಾ ಕ್ಷೇತ್ರದಲ್ಲಿರುವ ಹಲವಾರು ಬಡ ಕುಟುಂಬಗಳಿಗೆ/ಕೊಳಚೆ ನಿವಾಸಿಗಳಿಗೆ ಹಳದಿ ಪಡಿತರ ಚೀಟಿಯನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಕ್ಷೇತ್ರದಲ್ಲಿರುವ ಎಲ್ಲಾ ಅರ್ಹ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗುವುದೇ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 18,232 ಎ.ಪಿ.ಎಲ್ ಪಡಿತರ ಚೀಟಿ ಮತ್ತು 734 ಗಣಕೀಕೃತ ಹಳದಿ ಪಡಿತರ ಚೀಟಿಗಳನ್ನು ಘೋಷಿತ/ಅಘೋಷಿತ ಕೊಳಚೆ ಪ್ರದೇಶದ ಅರ್ಹ ಬಿ.ಪಿ.ಎಲ್ ಕುಟುಂಬಗಳಿಗೆ ವಿತರಿಸಲಾಗಿದೆ.

ಆ) ಬಂದಿದೆ. ಗಣಕೀಕೃತ ಹಳದಿ ಪಡಿತರ ಚೀಟಿಗಳನ್ನು ಘೋಷಿತ/ಅಘೋಷಿತ ಅರ್ಹ ಬಿ.ಪಿ.ಎಲ್. ಕೊಳೆಚೆ ನಿವಾಸಿಗಳಿಗೆ ವಿತರಿಸಲಾಗಿದೆ. ಆದರೆ ಕೊಳಚೆ ಪ್ರದೇಶದ ಹೊರಗಡೆ ವಾಸಿಸುತ್ತಿರುವ ಬಡವರಿಗೆ ಸಹ ಬಿ.ಪಿ.ಎಲ್. ಪಡಿತರ ಚೀಟಿ ನೀಡಲು ಸರ್ಕಾರ ತೀರ್ಮಾನಿಸಿದೆ ಹಳದಿ ಪಡಿತರ ಚೀಟಿಗಳಿಗಾಗಿ ಅರ್ಜಿಗಳನ್ನು ಪಡೆದುಕೊಳ್ಳಲಾಗಿದೆ.

ಇ) – ಹೌದು –

ಕಡುಬಡವರ ಆಹಾರ ಪಡಿತರ ಚೀಟಿ ವಿತರಣೆ

413 (3954) ಶ್ರೀ ನಾರಾಯಣ ಸ್ವಾಮಿ. ಎ (ಆನೇಕಲ್) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರವು ರಾಜ್ಯದಲ್ಲಿ ಬಿಪಿಎಲ್ ಪಡಿತರ ಚೀಟಿಯ ಹಳದಿ ಮತ್ತು ಕೇಸರಿ ಕಾರ್ಡ್‌ಗಳನ್ನು ವಿತರಿಸಲು ಕಾಲಾವಕಾಶ ತೆಗೆದುಕೊಂಡಿರುವುದು ನಿಜವೇ:

ಆ) ಆಗಿದ್ದಲ್ಲಿ, ಪಡಿತರ ಚೀಟಿಯ ಫಲಾನುಭವಿಗಳ ಪಟ್ಟಿ ಸಿದ್ಧವಿದೆಯೇ:

ಇ) ಪಡಿತರ ಚೀಟಿಯನ್ನು ಫಲಾನುಭವಿಗಳಿಗೆ ನೀಡುವಲ್ಲಿ ನಿಧಾನಗತಿಯಾಗಿ ಸಾಗಲು ಕಾರಣವೇನು:

ಈ) ಪಡಿತರ ಚೀಟಿ ತುರ್ತಾಗಿ ವಿತರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಸರ್ಕಾರವು ರಾಜ್ಯದಲ್ಲಿನ ಅರ್ಹ ಬಿ.ಪಿ.ಎಲ್ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಲು ಕಾಲಾವಕಾಶವನ್ನು ನೀಡಿದೆ, ಆದರೆ ಕೇಸರಿ ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ.

ಆ) ಹೌದು, ಮನೆಮನೆ ಸಮೀಕ್ಷೆಯ ಮುಖೇನ ಗುರುತಿಸಲಾಗಿರುವ ಬಿ.ಪಿ.ಎಲ್ ಫಲಾನುಭವಿಗಳ ಪಟ್ಟಿಯ ಸಿದ್ಧವಿದೆ.

ಇ) ಬಿ.ಪಿ.ಎಲ್. ಫಲಾನುಭವಿಗಳ ಪಡಿತರ ಚೀಟಿಗಳ ಮಾಹಿತಿಯ ಗಣಕೀಕರಣದಿಂದಾಗಿ

ಹಾಗೂ ಸಮೀಕ್ಷೆಯಲ್ಲಿ ಅರ್ಹರು ಬಿಟ್ಟು ಹೋಗಿದ್ದಾರೆ ಎಂಬ ದೂರುಗಳು ಬಂದಿದ್ದರಿಂದ ಅಂಥಹವರಿಗೆ ಹೊಸದಾಗಿ ಅರ್ಜಿಗಳನ್ನು ಸಲ್ಲಿಸಲು ಕಾಲಾವಕಾಶ ದಿನಾಂಕ: 16–06–2003 ರವರೆಗೆ ವಿಸ್ತರಿಸಿದ್ದರಿಂದ ಪಡಿತರ ಚೀಟಿಗಳ ವಿತರಣೆಯ ಕಾರ್ಯ ಸ್ವಲ್ಪ ತಡವಾಗಿರುತ್ತದೆ. ಹಾಲಿ ಹಳದಿ ಪಡಿತರೆ ಚೀಟಿಗಳ ವಿತರಣೆ ಕಾರ್ಯವು ಪ್ರಗತಿಯಲ್ಲಿದೆ.

ಈ) ಸರ್ಕಾರ ನಿರ್ದಿಷ್ಟ ಕಾಲಮಿತಿಯನ್ನು ಹಾಕಿದ್ದು ಹಳದಿ ಪಡಿತರ ಚೀಟಿ ವಿತರಿಸಲು ದಿ: 15.9.2003 ರಿಂದ ಪ್ರಾರಂಭಿಸಿ, ದಿ: 2.10.2003 ರಿಂದ ಹಳದಿ ಪಡಿತರ ಕಾರ್ಡ್ ವ್ಯವಸ್ಥೆ ಜಾರಿಗೆ ತರಲು ಗುರಿ ನಿಗದಿಸಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಹಳದಿ ಕಾಡುಗಳನ್ನು ಗುರುತಿಸುವಂಥ ವಿಚಾರದಲ್ಲಿ ಮಾನದಂಡ ಯಾವುದು ಎಂಬುದು ನಮಗೆ ಗೊತ್ತಾಗುತ್ತಿಲ್ಲ. ಇದನ್ನು ಅಧಿಕಾರಿಗಳು ಗುರುತಿಸುತ್ತಿದ್ದಾರೋ ಅಥವಾ ಬೇರೆ ಪಕ್ಷದವರು ತಾವು ಸಮಾಜ ಸೇವಕರು ಎಂದು ಹೇಳಿ ಗುರುತಿಸಿರುವವರಿಗೆ ನೀವು ಚೀಟಿ ಕೊಡುತ್ತಿದ್ದೀರೋ ಗೊತ್ತಿಲ್ಲ. ನಮ್ಮ ಕ್ಷೇತ್ರದಲ್ಲಿ 734 ಕುಟುಂಬದವರಿಗೆ ಕೊಟ್ಟಿದ್ದೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ನಿಜವಾದಂಥ ಅರ್ಹರು ಕನಿಷ್ಟ ಎಂದರೆ ಐದು ಸಾವಿರ ಮಂದಿ ಪಟ್ಟಿ ಮಾಡಿ ಕೊಡಬಹುದು. ಇತ್ತೀಚೆಗೆ ಇದನ್ನು ನಿಲ್ಲಿಸಿದ್ದಾರೆ ಅದಕ್ಕೆ ಕಾರಣವೇನು ಮತ್ತು ಎಲ್ಲಾ ಜನರಿಗೆ ಸರಿಯಾದಂಥ ನ್ಯಾಯ ಸಿಗುತ್ತಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ರಾಮಲಿಂಗಾರೆಡ್ಡಿ : ಸನ್ಮಾನ್ಯ ಸಭಾಧ್ಯಕ್ಷರೇ, ನಗರ ಪ್ರದೇಶಗಳಲ್ಲಿ ಹಿಂದೆ ಕೊಳಚೆ ಪ್ರದೇಶಗಳಲ್ಲಿರುವವರಿಗೆ ಮಾತ್ರ ಹಳದಿ ಕಾರ್ಡ್ ಕೊಡಬೇಕೆಂದು ತೀರ್ಮಾನ ಮಾಡಿದ್ದೆವು. ನಾನು ನಗರದ ಎಲ್ಲಾ ಶಾಸಕರ ಸಭೆಯನ್ನು ಕರೆದಿದ್ದೆ, ಆ ದಿನ ಮಾನ್ಯ ಕಟ್ಟಾಸುಬ್ರಮಣ್ಯ ನಾಯ್ಡುರವರೂ ಕೂಡ ಬಂದಿದ್ದರು. ಹಳದಿ ಕಾರ್ಡ್ ಕೊಡುವ ಬಗ್ಗೆ ಆ ದಿನ ಏನು ಮಾತನಾಡಿದ್ದೆವೋ ಅದು ಸಚಿವ ಸಂಪುಟದಲ್ಲಿ ಕೂಡ ಅನುಮೋದನೆಯಾಗಿದೆ. ಈಗ ಅಪ್ಲಿಕೇಷನ್ಸ್ ಕೂಡ ಕರೆದಿದ್ದೇವೆ. 700 ಜನ ಮತ್ತೆ ಅಪ್ಲಿಕೇಷನ್ಸ್ ತೆಗೆದುಕೊಂಡು ಹೋಗಿದ್ದರು. ಅದರಲ್ಲಿ 547 ಜನ ವಾಪಸ್ ತಂದು ಕೊಟ್ಟಿದ್ದಾರೆ. ಅರ್ಹತೆ ಇದ್ದರೆ, ಇವರೆಲ್ಲರಿಗೂ ಕೊಡುತ್ತೇವೆ. ಬೆಂಗಳೂರು ನಗರ ಮತ್ತು ಎಲ್ಲಾ ನಗರ ಪ್ರದೇಶಗಳಲ್ಲೂ ಕೂಡ ಕೊಳಚೆ ಪ್ರದೇಶಗಳಲ್ಲಿದ್ದವರಿಗೆ ಮಾತ್ರ ಹಳದಿ ಕಾರ್ಡ್ ಕೊಡಬೇಕೆಂದು ಮಾಡಿದ್ದೇವೆ. ಈಗ ಬೇರೆಯವರಿಗೂ ಕೂಡ, 17 ಸಾವಿರ ರೂಪಾಯಿಗಳ ಆದಾಯಕ್ಕಿಂತ ಕಡಿಮೆ ಇದ್ದವರು, ಕೊಳಚೆ ಪ್ರದೇಶ ಬಿಟ್ಟು ಆಚೆ ಇರತಕ್ಕಂಥ ಎಲ್ಲಾ ನಗರ ಪ್ರದೇಶಗಳವರಿಗೂ ಕೊಡುತ್ತೇವೆ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು : ಇವರನ್ನು ಗುರುತಿಸುವುದಕ್ಕೆ ಇರತಕ್ಕ ಮಾನದಂಡ ಏನು?

ಶ್ರೀ ರಾಮಲಿಂಗಾರೆಡ್ಡಿ : ಮಾನದಂಡ ಏನೆಂದರೆ, ನಗರ ಪ್ರದೇಶಗಳಲ್ಲಿ 17 ಸಾವಿರ ಆದಾಯಕ್ಕಿಂತ ಕಡಿಮೆ ಇರಬೇಕು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ತಾವು ಹೇಳಿದ್ದು ಸರಿ ಇದೆ. ಶಾಸಕರು ನಿಜವಾದಂಥ ಅರ್ಹರನ್ನು ಗುರುತಿಸಿ ಕೊಟ್ಟರೆ ಕೊಡುತ್ತೀರೋ ಅಥವಾ ಬೇರೆಯವರು ಹೇಳಿದವರಿಗೆ ಕೊಡುತ್ತೀರೋ. ಗ್ರಾಮಾಂತರ ಪ್ರದೇಶದಲ್ಲಿ, ಕೇಂದ್ರ ಸರ್ಕಾರ ಪ್ರಧಾನ ಮಂತ್ರಿಗಳ ಯೋಜನೆ "ಅಂತ್ಯೋದಯ" ವನ್ನು ತಂದಿದ್ದೀರಿ. ಬೆಂಗಳೂರು ಮಹಾನಗರದಲ್ಲಿ ಸುಮಾರು ಶೇಕಡ 15

ರಿಂದ 20 ರಷ್ಟು ಜನ ಅಂದರೆ 60 ಲಕ್ಷ ಜನರ ಪೈಕಿ 12 ಲಕ್ಷ ಜನ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವವರು ಮತ್ತು ಬಡವರು ಇದ್ದಾರೆ. ಅವರ ಬಗ್ಗೆ ನೀವು ಯಾವ ಯೋಜನೆಯನ್ನು ತಂದಿದ್ದೀರಿ? ಕೇಂದ್ರ ಸರ್ಕಾರದ ಎಲ್ಲಾ ಯೋಜನೆಗಳನ್ನು ಬೆಂಗಳೂರು ಮಹಾನಗರಕ್ಕೆ ಕೊಡುವಂಥ ಯೋಜನೆಯನ್ನು ತಾವು ಹಮ್ಮಿಕೊಂಡಿದ್ದೀರೋ ಇಲ್ಲವೋ?

ಶ್ರೀ ರಾಮಲಿಂಗಾರೆಡ್ಡಿ : ಹಿಂದೆ ಅಂತ್ಯೋದಯ ಯೋಜನೆಯನ್ನು 4 ಲಕ್ಷ 80 ಸಾವಿರ ಜನಕ್ಕೆ ಕೊಟ್ಟಾಗ, ಬೆಂಗಳೂರು ನಗರಕ್ಕೆ ಕೊಟ್ಟಿರಲಿಲ್ಲ. ನಾನೇ ಮಂತ್ರಿಯಾದ ಮೇಲೆ ಬೆಂಗಳೂರು ನಗರಕ್ಕೆ ಅಂತ್ಯೋದಯ ಯೋಜನೆಯ ಕಾರ್ಡ್ಸ್ ಕೊಡದೇ ಇರುವುದು ತಪ್ಪು ಎಂದು ಈ ಬಾರಿ ಬೆಂಗಳೂರು ನಗರಕ್ಕೆ ಅಂತ್ಯೋದಯ ಯೋಜನೆಯ ಕಾರ್ಡ್ಸ್ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇನೆ. ಬೆಂಗಳೂರು ನಗರಕ್ಕೆ ಸುಮಾರು 15 ಸಾವಿರ ಅಂತ್ಯೋದಯ ಕಾರ್ಡ್ಸ್ ಕೊಡುತ್ತಾ ಇದ್ದೇವೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ತಮ್ಮಲ್ಲಿ ಒಂದು ಮನವಿ. ಬೆಂಗಳೂರು ನಗರದಲ್ಲಿ ತಾವು ಅನೇಕ ವರ್ಷಗಳಿಂದ ವಾಸ ಮಾಡುತ್ತಿದ್ದೀರಿ. ಇದು ಬಡವರಿಗೆ ಸಂಬಂಧಪಟ್ಟ ಸಮಸ್ಯೆ. ತಾವೇನು ಸಂಖ್ಯೆ ಹೇಳುತ್ತಿದ್ದೀರಿ, ಅದು ಸಾಲುವುದಿಲ್ಲ. ಏಕೆಂದರೆ ಬಹಳಷ್ಟು ಮಂದಿ ಇದ್ದಾರೆ.

ಶ್ರೀ ರಾಮಲಿಂಗಾರೆಡ್ಡಿ : ಅಂತ್ಯೋದಯ ಕೇಂದ್ರ ಸರ್ಕಾರ ಕಾರ್ಯಕ್ರಮ 2 ಲಕ್ಷ 39 ಸಾವಿರದಲ್ಲಿ ಬೆಂಗಳೂರು ನಗರಕ್ಕೆ 15 ಸಾವಿರ ಕೊಟ್ಟಿದ್ದೇವೆ. ಹಿಂದೆ ಏನೂ ಕೊಟ್ಟಿರಲಿಲ್ಲ. ಈ ಬಾರಿ ಅಂತ್ಯೋದಯ ಕಾರ್ಡ್ಸ್ ಕೊಟ್ಟಿದ್ದೇವೆ. 31 ಲಕ್ಷ ಜನಸಂಖ್ಯೆಗೆ ಮಾತ್ರ ಕಡಿಮೆ ಬೆಲೆಯಲ್ಲಿ ಕೇಂದ್ರ ಸರ್ಕಾರ ಸಬ್ಸಿಡಿ ಕೊಡುತ್ತದೆ. ಉಳಿದಿರತಕ್ಕ 64 ಲಕ್ಷ ಏನು ನಾವು ರಾಜ್ಯದಲ್ಲಿ ಹಸಿರು ಕಾರ್ಡ್ ಕೊಟ್ಟಿದ್ದೇವೆ. ಇದೆಲ್ಲವನ್ನೂ ರಾಜ್ಯಸರ್ಕಾರವೇ ಭರಿಸುತ್ತದೆ.

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು : ಸೀಮೆಎಣ್ಣೆಯನ್ನು ಒಂದು ಕಡೆಯೂ ಕೊಡುತ್ತಾ ಇಲ್ಲ. ಇದು ಮಾನ್ಯ ಮಂತ್ರಿಗಳ ಗಮನಕ್ಕೂ ಬಂದಿದೆ. ಈ ರೀತಿ ಬೆಂಗಳೂರು ನಗರದ ಜನತೆಗೆ ತೊಂದರೆಯಾಗುತ್ತಿದ್ದರೂ ಕ್ರಮ ಕೈಗೊಂಡಿಲ್ಲ. ಪ್ರತಿ ಬಡಾವಣೆಯಲ್ಲಿ ಸೀಮೆಎಣ್ಣೆ ಸರಿಯಾಗಿ ವಿತರಣೆಯಾಗುತ್ತಿಲ್ಲ. ಇದು ಶಿವಾಜಿನಗರದಲ್ಲಿ ಒಂದೇ ಅಲ್ಲ. ಇಡೀ ಬೆಂಗಳೂರು ನಗರದಲ್ಲಿರುವಂಥ ಬಡವರಿಗೆ ಸೀಮೆಎಣ್ಣೆ ಸರಿಯಾಗಿ ವಿತರಣೆಯಾಗುತ್ತಿಲ್ಲ. ತಾವು ಆಹಾರ ಮಂತ್ರಿಗಳಾಗಿ ಒಳ್ಳೆಯ ಸ್ಕೀಮನ್ನು ತಂದಿದ್ದೇವೆಂದು ಹೇಳಿದಿರಿ. ಇದರ ಬಗ್ಗೆ ತಾವು ಒಂದು ಸಾರಿ ಸೀಜ್ ಮಾಡಿದ್ದೇವೆಂದು ಹೇಳಿದಿರಿ. ಆದರೆ, ಇವತ್ತಿನವರೆಗೆ ಎಲ್ಲಾ ಪ್ರದೇಶದಲ್ಲೂ ಸೀಮೆಎಣ್ಣೆ ಸಮರ್ಪಕವಾಗಿ ವಿತರಣೆಯಾಗುತ್ತಿಲ್ಲ. ಇದರ ಬಗ್ಗೆ ಸರ್ಕಾರ ಗಮನಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತದೆಯೇ ಅಥವಾ ಇಲ್ಲವೆ, ಬಡವರ ಶೋಷಣೆಯನ್ನು ಹೀಗೇ ಮಾಡುತ್ತದೆಯೇ?

ಶ್ರೀ ರಾಮಲಿಂಗಾರೆಡ್ಡಿ : ಮೊದಲೆಲ್ಲಾ ಸೀಮೆಎಣ್ಣೆಯನ್ನು ಬೆಳಿಗ್ಗೆ 4 ಗಂಟೆ ಅಥವಾ 5 ಗಂಟೆಯಲ್ಲಿ ಕೊಡುತ್ತಿದ್ದರು. ನಮ್ಮ ಸರ್ಕಾರ ಬಂದಮೇಲೆ ಬೆಳಿಗ್ಗೆ 8 ರಿಂದ 12 ಮತ್ತೆ ಸಾಯಂಕಾಲ 4 ರಿಂದ 6 ಗಂಟೆಯವರೆಗೆ ಕೊಡಬೇಕೆಂದು ಮಾಡಿದ್ದೇವೆ. ಮತ್ತೆ ಕೂಪನ್ ಸಿಸ್ಟಂ ಕೂಡ ಮಾಡಿದ್ದೇವೆ. ಆ ಕೂಪನ್ ವಾಪಸ್ ಕೊಟ್ಟರೆ ಮಾತ್ರ ಕೊಡತಕ್ಕ ಪದ್ಧತಿ ಇತ್ತು. ಆದರೆ, ಇದು ಈಗ ಇಲ್ಲ. ಬಿ.ಪಿ.ಎಲ್.ಗೆ ಕೂಪನ್ ಇದೆ. ಎ.ಪಿ.ಎಲ್.ಗೆ ನಾವು ಮತ್ತೆ ಅಕ್ಟೋಬರ್‌ನಿಂದ ಕೊಡುತ್ತಾ ಇದ್ದೇವೆ. ಈ ಕೂಪನ್ ಸಿಸ್ಟಮ ತಂದಮೇಲೆ, ಕೂಪನ್ ವಾಪಸ್ ಕೊಟ್ಟು ಸೀಮೆಎಣ್ಣೆ ಪಡೆಯಬೇಕು. ನಾವು ಪ್ರತಿ ತಿಂಗಳೂ ಈ ಕೂಪನ್ ಲೆಕ್ಕ ತೆಗೆದುಕೊಳ್ಳುತ್ತೇವೆ. ಅಂಗಡಿಯವರು ಪ್ರತಿ ತಿಂಗಳೂ ಕೂಪನ್

ನಮಗೆ ವಾಪಸ್ ಕೊಡಬೇಕು. ಆ ರೀತಿ ಕೊಟ್ಟರೆ ಮಾತ್ರ ಲೆಕ್ಕ ಸಿಗುತ್ತೆ. ಆದ್ದರಿಂದ, ಸಮರ್ಪಕವಾಗಿ ಆಗುತ್ತಾ ಇದೆ. ಕೆಲವು ಕಡೆ ದೂರುಗಳು ಬಂದಿದೆ. ನಾನೇ ಬೆಂಗಳೂರು ನಗರದಲ್ಲಿ 20–30 ಕಡೆ ಹೋಗಿದ್ದೇನೆ. ಎಲ್ಲಾ ಅಂಗಡಿಗಳನ್ನೂ ವಿಸಿಟ್ ಮಾಡಿ, ಎಲ್ಲೆಲ್ಲಿ ತಪ್ಪಾಗಿದೆ. ಬೇಕಾದಷ್ಟು ಸಸ್ಪೆನ್‌ಷನ್ಸ್ ಕೂಡ ಮಾಡುತ್ತಾ ಇದ್ದೇವೆ.

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು : ನಿಜವಾಗಿಯೂ ಬೆಂಗಳೂರು ಮಹಾನಗರದಲ್ಲಿ ಸೀಮೆಎಣ್ಣೆ ಸರಿಯಾಗಿ ವಿತರಣೆಯಾಗುತ್ತಾ ಇಲ್ಲ. ತುಂಬಾ ದೂರುಗಳು ಇವೆ. ದಯವಿಟ್ಟು ಇದರ ಬಗ್ಗೆ ತಾವು ಗಮನ ಕೊಡಬೇಕು. ನಮ್ಮ ಜೊತೆಯಲ್ಲಿ ತಾವು ತಪಾಸಣೆಗೆ ಬರಬೇಕು. ಮಂತ್ರಿಗಳು ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ತಪಾಸಣೆಗೆ ಬರಬೇಕು.

ಅಧ್ಯಕ್ಷರು : ನೀವು ಕರೆಯಿರಿ ಬರುತ್ತಾರೆ.

ಅಧ್ಯಕ್ಷರು : ಎಲ್ಲಾ ಕಾರ್ಪೊರೇಟರುಗಳ ಮೀಟಿಂಗ್ ಕರೆದಿದ್ದೇನೆ. ಎಲ್ಲಾ ಶಾಸಕರ ಮೀಟಿಂಗ್ ಕರೆದಿದ್ದೇನೆ. ಸಮರ್ಪಕವಾಗಿ ವಿತರಣೆಯಾಗುವುದಕ್ಕೆ ತಮ್ಮ ಸಹಕಾರ ಬೇಕೆಂದು ಕೇಳಿದ್ದೇನೆ. ಅವರೂ ಕೂಡ ಎಲ್ಲಾ ರೀತಿಯ ಸಹಕಾರ ಕೊಟ್ಟಿದ್ದಾರೆ. ನಾವು ಇದರ ಬಗ್ಗೆ ವಿಜೆಲೆನ್ಸ್ ಕಮಿಟಿ ಕೂಡ ಮಾಡುತ್ತಾ ಇದ್ದೇವೆ. ಹಿಂದೆ ವಿಜೆಲೆನ್ಸ್ ಕಮಿಟಿ ಮಾಡಿದಾಗ, ಸರಿಯಾಗಿ ಕೆಲಸ ಮಾಡುತ್ತಾ ಇರಲಿಲ್ಲ. ಈಗ ಯಾವುದೇ ಪಕ್ಷದ ಶಾಸಕರು ಇರಬಹುದು, ಅವರನ್ನು ಕನ್‌ಸಲ್ಟ್ ಮಾಡಿ, ವಿಜೆಲೆನ್ಸ್ ಕಮಿಟಿ ಮಾಡಬೇಕೆಂದು ನಾನು ಆದೇಶ ಕೊಟ್ಟಿದ್ದೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಹಳದಿ ಕಾರ್ಡುಗಳ ವಿಚಾರದಲ್ಲಿ ನೀವು ರಾಜಕೀಯ ಮಾಡಬೇಡಿ, ನಮ್ಮ ಮಾತುಗಳನ್ನೂ ತೆಗೆದುಕೊಳ್ಳಿ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಹಳದಿ ಕಾರ್ಡುಗಳಿಗೆ ಸಮಯ ನಿಗದಿ ಮಾಡಿ ಏನು ನಾಗರೀಕರಿಂದ ಅರ್ಜಿಗಳನ್ನು ಕರೆದಿದ್ದಾರೆ. ಬಹುತೇಕ ಅರ್ಜಿಗಳನ್ನು ಪರಿಗಣಿಸಿ ಬಿ.ಪಿ.ಎಲ್. ಲಿಸ್ಟ್ ಮಾಡಿ, ಕಾರ್ಡುಗಳನ್ನು ಇಟ್ಟುಕೊಂಡಿದ್ದಾರೆ. ಇಲ್ಲಿಗೆ 4 ವರ್ಷವಾಯಿತು. ಒಂದು ಕಾರ್ಡನ್ನೂ ಹಂಚುವುದಕ್ಕಾಗಲಿಲ್ಲ. ನನ್ನ ಕ್ಷೇತ್ರದಲ್ಲಿ ಕಾರ್ಡ್ ಹಂಚಬೇಕೆಂದು ಬಂದರು. 50 ಕಾರ್ಡುಗಳನ್ನು ಹಂಚಿ, ಮಿಕ್ಕಿದ್ದು ಹಂಚಬಾರದು ಎಂದು ಹೇಳಿ, ಡೇಟ್ ಮುಂದುವರಿಸಿದ್ದಾರೆಂದರು. ಡೇಟ್ ಮುಂದುವರಿಸುವುದಕ್ಕೂ, ಕಾರ್ಡ್ ರೆಡಿಯಾಗಿರುವುದನ್ನು ಕೊಡುವುದಕ್ಕೂ ಏನು ಕಾರಣ? ಏಕೆ ನಿಲ್ಲಿಸಿದರು ಎಂಬುದನ್ನು ದಯವಿಟ್ಟು ಮಂತ್ರಿಗಳು ಹೇಳಬೇಕು. ಅದರ ಜೊತೆಗೆ, ಮತ್ತೆ ನನ್ನ ಕ್ಷೇತ್ರದಲ್ಲಿ 25 ಸಾವಿರ ಅಪ್ಲಿಕೇಷನ್ಸ್ ಬಂದಿದೆ. ಇವರು ಮೀಟಿಂಗ್ ಮಾಡಿದ್ದಾರೆ. ರೆವಿನ್ಯೂ ಇಲಾಖೆಯವರು ಫುಡ್ ಇಲಾಖೆಗೆ 50 ಪರ್ಸೆಂಟ್ ಡೆಪ್ಯುಟೇಶನ್ ಕೊಡಬೇಕೆಂದು ಗವರ್ನಮೆಂಟಿನಲ್ಲಿ ಅಗ್ರಿಮೆಂಟ್ ಆಗಿದೆ. ಎನ್.ಜಿ.ಓ.ನಲ್ಲಿ ಆದರೆ ಅವರು ಕೆ.ಎ.ಟಿ. ನಲ್ಲಿ ಸ್ಟೇ ತಂದಿದ್ದಾರೆ. ತಮ್ಮ ಇಲಾಖೆಯಿಂದ ಅಡ್ವೊಕೇಟ್ ಹೋಗಿಲ್ಲ, ಅವರು ಪ್ರಸೆಂಟ್ ಮಾಡಿ ಸ್ಟೇ ವಕೇಟ್ ಮಾಡುವ ಕೆಲಸ ಇದುವರೆಗೂ ಆಗಿಲ್ಲ. ಮತ್ತೆ ಅಕ್ಟೋಬರ್ ಒಳಗಡೆ ಕೆಲಸ ಮುಗಿಸುತ್ತೇವೆಂದು ಹೇಳಿದ್ದೀರಿ. ಇದಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ ಮತ್ತು ಕಾರ್ಡ್ ಹಂಚಿಕೆಯನ್ನು ನಿಲ್ಲಿಸಿದ್ದೀರಿ? ಮತ್ತೆ 25 ಸಾವಿರ ನನ್ನ ಕ್ಷೇತ್ರದಲ್ಲಿ ಯಾವಾಗ ಹಂಚುತ್ತೀರಿ. ಸ್ಟೇ ವೆಕೇಟ್ ಮಾಡತಕ್ಕ ಜವಾಬ್ದಾರಿ ಸರ್ಕಾರದ್ದು ಇದೆಯೋ ಅಥವಾ ಇಲ್ಲವೋ ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ರಾಮಲಿಂಗಾರೆಡ್ಡಿ : ಸನ್ಮಾನ್ಯ ಸದಸ್ಯರು ಹೇಳಿದಹಾಗೆ ಯಾವ ಸ್ಟೇ ಇಲ್ಲ. ಹಿಂದೆ

ರೇಷನ್ ಕಾರ್ಡ್ಸ್‌ಗೆ ಕಂಪ್ಯೂಟರೈಸೇಷನ್ ಮಾಡಬೇಕೆಂದು ಇರಲಿಲ್ಲ. ಆದರೆ, ಈಗ ನಾವು ಕಂಪ್ಯೂಟರೈಸೇಷನ್ ಮಾಡಬೇಕೆಂಬ ತೀರ್ಮಾನ ತೆಗೆದುಕೊಂಡಿದ್ದರಿಂದ ಸ್ವಲ್ಪ ತಡವಾಗಿದೆ. ಅಕ್ಟೋಬರ್ 2ನೇ ತಾರೀಖಿನ ಹೊತ್ತಿಗೆ ರಾಜ್ಯದಲ್ಲಿರತಕ್ಕ ಎಲ್ಲರಿಗೂ ನಾವು ಹಳದಿ ಕಾರ್ಡ್ ಕೊಡುತ್ತೇವೆ. ಮೊದಲು ನಾವೇನು ಗುರುತಿಸಿದ್ದೆವು 42 ಲಕ್ಷ, ಅದು ಕಂಪ್ಯೂಟರೈಸೇಷನ್ ಆಗಿದೆ. ಎಲ್ಲಾ ತಾಲ್ಲೂಕು ಆಫೀಸುಗಳಲ್ಲಿ ಇದೆ. ರೆವಿನ್ಯೂ ಇಲಾಖೆಯವರಿಗೆ ನಾವು ಡೆಪ್ಯುಟೇಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೆವು. ಶಿರಸ್ತೇದಾರರು, ಫುಡ್ ಇನ್‌ಸ್ಪೆಕ್ಟರು, ಎಫ್.ಡಿ.ಸಿ., ಎಸ್.ಡಿ.ಸಿ. ಇವರನ್ನೂ ಈ ವಿಚಾರದಲ್ಲಿ ನಮಗೂ ರೆವಿನ್ಯೂ ಇಲಾಖೆಯವರಿಗೂ, ಡೆಪ್ಯುಟೇಷನ್ಸ್‌ಗೆ ಅವಕಾಶ ಕೊಟ್ಟಿಲ್ಲವೆಂದು ಸಮಸ್ಯೆ ಬಂದಿದೆ. ಆದರೆ ಸಚಿವ ಸಂಪುಟದಲ್ಲಿ ತೀರ್ಮಾನವಾಗಿದೆ. ಈ ತಿಂಗಳ ಹೊತ್ತಿಗೆ ನಾವು ರೆವಿನ್ಯೂ ಇಲಾಖೆಯವರಿಗೆ ಡೆಪ್ಯುಟೇಷನ್ ಮೇಲೆ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುತ್ತೇವೆ. ನಾವು ಡೆಪ್ಯುಟೇಷನ್‌ಗೆ ಅವಕಾಶ ಕೊಡದೇ ಇದ್ದುದ್ದರಿಂದ ಇಷ್ಟೊಮದು ಪ್ರಾಬ್ಲಮ್ ಆಯಿತು. ಅವರು ನಮಗೆ ಸಹಕಾರ ಕೊಡುತ್ತಾ ಇರಲಿಲ್ಲ. ಆದರೆ, ಇದು ತೀರ್ಮಾನವಾಗಿದೆ. ನಾನು ಮೊನ್ನೆ ಸಚಿವ ಸಂಪುಟದಲ್ಲೂ ಮಾತನಾಡಿದ್ದೇನೆ. ಮುಖ್ಯಮಂತ್ರಿಗಳು ಮುಖ್ಯ ಕಾರ್ಯದರ್ಶಿಯವರಿಗೆ ಆದೇಶ ಕೊಟ್ಟಿದ್ದಾರೆ. ಅದು ತೀರ್ಮಾನವಾದ ತಕ್ಷಣ ರಾಜ್ಯದಲ್ಲಿ ಎಲ್ಲಾ ಕಡೆ, ಅಕ್ಟೋಬರ್ 2ನೇ ತಾರೀಖಿನ ಹೊತ್ತಿಗೆ ಹಳದಿ ಕಾರ್ಡ್ ಕೊಡತಕ್ಕ ಪ್ರಕ್ರಿಯೆ ಆಗುತ್ತೆ ಆನೇಕಲ್ ತಾಲ್ಲೂಕಿನಲ್ಲಿ ಹಿಂದೆ ಹಸಿರು ಕಾರ್ಡ್ ಜಾಸ್ತಿ ಇತ್ತು. ಮೊನ್ನೆ ಸರ್ವೆ ಮಾಡಿದಾಗ ಕಡಿಮೆಯಾಯಿತು. ಈಗ ಅವರು 25 ಸಾವಿರ ಅಪ್ಲಿಕೇಷನ್ಸ್ ಬಂದಿದೆಯೆಂದು ಹೇಳಿದ್ದಾರೆ. ಅದರಲ್ಲಿ ಅರ್ಹತೆ ಇರತಕ್ಕ ಎಲ್ಲರಿಗೂ ಕೂಡ ಹಳದಿ ಕಾರ್ಡ್ ಕೊಡುವಂಥ ತೀರ್ಮಾನ ತೆಗೆದುಕೊಂಡಿದ್ದೇವೆ, ಅವುಗಳನ್ನು ಕೊಡುತ್ತೇವೆ.

ಶ್ರೀ ಎ. ನಾರಾಯಣಸ್ವಾಮಿ : ಈಗ 22 ಸಾವಿರ ರೇಷನ್ ಕಾರ್ಡ್ಸ್ ರೆಡಿಯಾಗಿ ಮೂರು ತಿಂಗಳಾಗಿದೆ. ಇವು ಮೂರು ತಿಂಗಳಿಂದ ಕಛೇರಿಯಲ್ಲೇ ಏಕೆ ಕೊಳೆಯಬೇಕು? ಇವುಗಳನ್ನು ತಾವೇ ಕೊಡಬೇಕೆಂದಾದರೆ, ಬಂದು ಕೊಡಿ. ಮಂತ್ರಿಗಳೇ ಪ್ರತಿಯೊಂದು ಮನೆಗೂ ಬಂದು ಕೊಡಬೇಕಾದರೆ ನನ್ನದೇನೂ ಅಭ್ಯಂತರ ಇಲ್ಲ. ಆದರೆ ಅಧಿಕಾರಿಗಳು ಏಕೆ ಕೊಡಬಾರದು ಅಥವಾ ಶಾಸಕರಿಂದ ಏಕೆ ಕೊಡಿಸಬಾರದು? ತಾವು ಬಂದು ಕೊಡಬೇಕಾ ಹೇಳಿ?

ಶ್ರೀ ರಾಮಲಿಂಗರೆಡ್ಡಿ : ಇದು ಆನೇಕಲ್ ತಾಲ್ಲೂಕೇ ಅಲ್ಲ, ಎಲ್ಲಾ ಕಡೆಯೂ ಕೂಡ ಹಾಗೆಯೇ ಇದೆ. ನಮ್ಮ ರೆವಿನ್ಯೂ ಇಲಾಖೆಯ ಈ ಡಿಸ್‌ಪ್ಯೂಟ್‌ನಿಂದ ಎಲ್ಲಾ ಕಡೆಯೂ ಹಾಗೆಯೇ ಇದೆ. ನಾನು ರೇಷನ್ ಕಾರ್ಡ್ ಕೊಡುವುದಕ್ಕೆ ಎಲ್ಲೂ ಕೂಡ ಹೋಗುವುದಿಲ್ಲ. ರೇಷನ್ ಕಾರ್ಡ್ ಕೊಡಿ ಎಂದು ನಾವು ಆದೇಶ ಕೊಡುತ್ತೇವೆ ಅಷ್ಟೆ. ಸಚಿವ ಸಂಪುಟದ ತೀರ್ಮಾನದ ಪ್ರಕಾರ ಅಕ್ಟೋಬರ್ 2ರ ಹೊತ್ತಿಗೆ ಎಲ್ಲಾ ಕಡೆ ಕೊಡುತ್ತೇವೆ. ನಿಮ್ಮಲ್ಲಿ ಹೊಸ ಅಪ್ಲಿಕೇಷನ್ 25 ಸಾವಿರ ಬಂದಿದೆ. ಆದರೆ, ರಾಜ್ಯದಲ್ಲಿ ಒಟ್ಟು 30 ಲಕ್ಷ ಹೆಚ್ಚುವರಿಯಾಗಿ ಬಂದಿದೆ. ಇವುಗಳನ್ನೂ ನಾನು ಸ್ಕೂಟಿನಿ ಮಾಡಿ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈಗೇನು ರೆಡಿ ಮಾಡಿದ್ದೀರಿ, ಆ ಬಿ.ಪಿ.ಎಲ್. ಕಾರ್ಡುಗಳನ್ನು ಕೊಡುವಂಥ ವ್ಯವಸ್ಥೆ ಮಾಡಿ. ನೀವು ರೀ ಸರ್ವೆ ಮಾಡಿದಿರಿ. ಇದು ಏನಾಗಿತ್ತು ಎಂದರೆ, ಹಿಂದಿನ ಸರ್ಕಾರ ಇದ್ದಾಗ 65 ಲಕ್ಷ ಕುಟುಂಬಗಳನ್ನು ಬಿ.ಪಿ.ಎಲ್ ಎಂದು ಮಾಡಿದ್ದರು. ಇಗ ನೀವು 28 ಸಾವಿರ ಮಾಡಿದ್ದೀರಿ. ಇತ್ತೀಚೆಗೆ ಒತ್ತಾಯ ಜಾಸ್ತಿಯಾದ ಮೇಲೆ ಮತ್ತೆ ರೀ ಸರ್ವೆ

ಮಾಡಿದ್ದೀರಿ. ಕೆಲವು ಕಡೆ ಸರಿಯಾದ ರೀತಿಯಲ್ಲಿ ಆರ್ಡರಿನಲ್ಲಿ ಬಂದಿಲ್ಲವೆಂದು ಹೊಸದಾಗಿ ಸರ್ವೆ ಮಾಡಿದ್ದೀರಿ. ಈ ರೀತಿ ಸರ್ವೆ ಮಾಡಿದ ಮೇಲೆ ಮತ್ತೆ ಹೊಸದಾಗಿ ಅರ್ಜಿಗಳು ಬಂದಿವೆ. ಹುಬ್ಬಳ್ಳಿ ಧಾರವಾಡದ ಉದಾಹರಣೆ ಹೇಳಬೇಕಾದರೆ ಹೊಸದಾಗಿ 40 ಸಾವಿರಕ್ಕಿಂತ ಹೆಚ್ಚಿಗೆ ಅರ್ಜಿಗಳು ಬಂದಿವೆ. ಹೀಗಾಗಿ ಬಹಳಷ್ಟು ಕಡೆ ಏನಾಗಿದೆ. ಅರ್ಹರಿದ್ದಂಥವರು ಪಟ್ಟಿಯಲ್ಲಿ ಬಂದಿಲ್ಲ. ಅನರ್ಹರಿದ್ದವರು ಲಿಸ್ಟ್‌ನಲ್ಲಿ ಬಂದಿದ್ದಾರೆ. ಯಾರು ಅರ್ಹರಿದ್ದಾರೆ. ಅವರು ಹೊರಗೆ ಉಳಿದಿದ್ದಾರೆ. ನೀವು ರೀ ಸರ್ವೆ ಮಾಡಿ, ಅದರಲ್ಲಿ ಯಾರಿದ್ದಾರೆ ಅವರನ್ನು ತೆಗೆದುಕೊಳ್ಳುವಂಥಾದ್ದು ಮತ್ತು ಈಗಾಗಲೇ ಹಳದಿ ಕಾರ್ಡ್ ಏನು ತಯಾರಾಗಿವೆ ಅವುಗಳನ್ನು ಹಂಚುವಂಥ ಕೆಲಸ ಮಾಡಿ. ಆಯಾ ಕ್ಷೇತ್ರದ ಶಾಸಕರ ಮುಖಾಂತರ ಹಂಚುವಂಥ ಕೆಲಸ ಮಾಡಿ. ಹುಬ್ಬಳ್ಳಿ ಧಾರವಾಡದಲ್ಲಿ ನಾವು ಹಂಚಿದ್ದೇವೆ. ಅಲ್ಲೇನೂ ಹೆಲ್ಡ್ ಅಪ್ ಆಗಿಲ್ಲ. ಅದೇರೀತಿ ತಾವು ಎಲ್ಲಾ ಕಡೆಗೂ ಸೂಚನೆಯನ್ನು ಕೊಟ್ಟು ಆಯಾ ಕ್ಷೇತ್ರದ ಶಾಸಕರ ಮುಖಾಂತರ, ತಮ್ಮ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿ ಶಾಸಕರ ಮುಖಾಂತರ ಹಳದಿ ಕಾರ್ಡ್ ಹಂಚುವಂಥ ಕೆಲಸವನ್ನು ಮಾಡಿಸಿಬಿಟ್ಟರೆ, ಇವೆಲ್ಲಾ ಸಮಸ್ಯೆಗಳೂ ಬಗೆಹರಿಯುತ್ತವೆ. ಗೊಂದಲ ನಿರ್ಮಾಣವಾಗಿದ್ದರೂ, ಅವು ನಿವಾರಣೆಯಾಗುವುದಕ್ಕೆ ಸಾಧ್ಯವಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ವಿರೋಧ ಪಕ್ಷದ ನಾಯಕರು ಒಂದು ಸಲಹೆ ಕೊಟ್ಟರು. ಶಾಸಕರ ಮೂಲಕ ಕಾರ್ಡ್ ಹಂಚಿ ಎಂದು ಹೇಳಿದರು. ಶಾಸಕರ ಮೂಲಕ ಕಾರ್ಡ್ ಹಂಚಿಸುವುದಕ್ಕೆ ಹೋದರೆ ನಮಗೂ ಸಹಿತ ಏಟುಗಳು ಬೀಳುತ್ತವೆ. ಪೊಲೀಸಿನವರ ರಕ್ಷಣೆಯಲ್ಲಿ ಕಾರ್ಡ್ ಹಂಚತಕ್ಕ ಪರಿಸ್ಥಿತಿ ಬಂದಿದೆ. ಏಕೆಂದರೆ, ತಮಗೆ ಗೊತ್ತಿದೆ ಕೆಳ ಹಂತದಲ್ಲಿ ನಿಜವಾಗಿಯೂ ಬಿ.ಪಿ.ಎಲ್. ಕಾರ್ಡುದಾರರನ್ನು ಗುರುತಿಸತಕ್ಕಂಥಾದ್ದು ಇವತ್ತಿನ ಪೊಲಿಟಿಕಲ್ ಸೆಟ್ ಅಪ್‌ನಲ್ಲಿ ಬಹಳ ಕಷ್ಟ ಇದೆ. ನನ್ನ ಅಭಿಪ್ರಾಯದಲ್ಲಿ ಅದೇನು 64 ಲಕ್ಷ ಹಸಿರು ಕಾರ್ಡುಗಳು ಇತ್ತಲ್ಲಾ, ಅದನ್ನೇ ಮುಂದುವರಿಸಿದ್ದರೆ, ಈ ಗೊಂದಲವೇ ಇರುತ್ತಿರಲಿಲ್ಲ. ನಿಮ್ಮ ಪಾರ್ಟಿ ಸರ್ಕಾರದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ನೀವು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದೀರಿ. Even today, at the fag end of the term ಹಂಚತಕ್ಕಂಥ ಸ್ಥಿತಿಯಿದೆ. ಇದಕ್ಕೆ ಅಲ್ಲಿರತಕ್ಕಂಥ ಗೊಂದಲವೇ ಕಾರಣ. ನೀವು ಏನು ಮಾಡುತ್ತೀರೋ ಮಾಡಿಕೊಳ್ಳಿ. ಆದರೆ ನಮ್ಮ ಶಾಸಕರನ್ನು ಮಾತ್ರ ಇದರಲ್ಲಿ ಇನ್‌ವಾಲ್ವ್ ಮಾಡುವುದಕ್ಕೆ ಹೋಗಬೇಡಿ.

ಶ್ರೀ ರಾಮಲಿಂಗಾರೆಡ್ಡಿ : ನಮ್ಮ ರಾಜ್ಯದಲ್ಲಿ ಹಿಂದೆ ಒಟ್ಟು ಒಂದು ಕೋಟಿ 13 ಲಕ್ಷ ಕಾರ್ಡ್‌ಗಳು ಇದ್ದುವು. ಅದರಲ್ಲಿ 64 ಲಕ್ಷ ಹಸಿರು ಕಾರ್ಡ್ ಮತ್ತು ಆದರೆ ಅನರ್ಹರು ಇದರಲ್ಲಿ ಬಹಳ ಜನರು ಸೇರಿದ್ದಾರೆಂದು ಇದನ್ನು ರೀ-ಸರ್ವೆ ಮಾಡುವುದಕ್ಕೆ ಹಿಂದೆ ತೀರ್ಮಾನ ತೆಗೆದುಕೊಂಡಿದ್ದು. ಈಗ ದಿನಾಂಕ: 20-08-03ಕ್ಕೆ ಮುಂಚೆ 42 ಲಕ್ಷ ಕಾರ್ಡ್‌ಗಳೇನಿವೆಯೋ ಇವೆಲ್ಲವುಗಳನ್ನೂ ನಾವು ಹಂಚಿ ಬಿಡುತ್ತೇವೆ. ಆಯಾಯ ಭಾಗಗಳಲ್ಲಿರತಕ್ಕಂಥ ಶಾಸಕರು, ಲೋಕಸಭಾಸದಸ್ಯರು, ಜಿಲ್ಲಾಪಂಚಾಯತ್‌ನವರು ಅವರ ನೇತೃತ್ವದಲ್ಲಿಯೇ ಕೊಡಿ ಎಂದು ನಾನು ಎಲ್ಲಾ ಜಿಲ್ಲೆಗಳಿಗೆ ಹೋದಾಗ ಇದನ್ನು ಪಕ್ಷಾತೀತವಾಗಿ ಮಾಡಿ ಎಂದು ಹೇಳಿದ್ದೇನೆ.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರೆ, ಶಾಸಕರುಗಳಾಗಲೀ, ಜಿಲ್ಲಾಪಂಚಾಯತ್‌ನವರ ಮೂಲಕವಾಗಲೀ ಕಾರ್ಡ್‌ಗಳನ್ನು ಕೊಟ್ಟಿಲ್ಲ. ನಿಮ್ಮ ವಿಲೇಜ್‌ಅಕೌಂಟೆಂಟ್

ಯಾವುದೋ ಒಂದು ಮನೆಯಲ್ಲಿ ಕುಳಿತುಕೊಂಡು ಎಲ್ಲಾ ಕಾರ್ಡ್‌ಗಳನ್ನು ಹಂಚಿದ್ದಾರೆ. ನನ್ನ ಕ್ಷೇತ್ರದಲ್ಲಿ ನಮ್ಮ ಯಾರ ಗಮನಕ್ಕೂ ಬಂದಿಲ್ಲ. ಅದು ಎಂ.ಪಿಗಳಾಗಬಹುದು. ಶಾಸಕರಾಗಿರಬಹುದು, ಜಿಲ್ಲಾಪಂಚಾಯತ್ ಸದಸ್ಯರೇ ಆಗಿರಬಹುದು. ಇವರ್ಯಾರ ಮೂಲಕವೂ ಕೊಟ್ಟಿಲ್ಲ. ಸುಮ್ಮನೆ ಏಕೆ ಸುಳ್ಳು ಹೇಳುತ್ತೀರಿ? ಇದು ಸತ್ಯಕ್ಕೆ ದೂರವಾದಂಥ ಮಾತುಗಳು. ನೀವು ನಮ್ಮಲ್ಲಿ ವಿಲೇಜ್ ಅಕೌಂಟೆಂಟ್ ಮೂಲಕ ವಿತರಣೆ ಮಾಡಿದ್ದೀರಿ. ಇದನ್ನು ನೀವು ಒಪ್ಪಿಕೊಳ್ಳಿ.

ಅಧ್ಯಕ್ಷರು : ಸಚಿವರು ಅದನ್ನು ವೈರಿಫೈ ಮಾಡಿಸಿ, ಸಚಿವರು ಆ ಕಾರ್ಯವನ್ನು ಮಾಡುತ್ತಾರೆ.

ಶ್ರೀ ಕೆ. ಶ್ರೀನಿವಾಸ ಗೌಡ (ಕುಡುವನಹಳ್ಳಿ) : ಮಾನ್ಯ ಸಚಿವರು ಮಾತನಾಡುವಾಗ, ಹೇಳಿದಂತೆ ಜನಪ್ರತಿನಿಧಿಗಳ ಮೂಲಕ ಮಾಡಿಸಿಲ್ಲ. ವಿಲೇಜ್ ಅಕೌಂಟೆಂಟ್ ಮೂಲಕ ವಿತರಣೆ ಮಾಡಿದ್ದಾರೆ.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ಹಸಿರು ಕಾರ್ಡ್‌ಗಳು ಒಮದು ಕೋಟಿ ಚಿಲ್ಲರೆ ಇರತಕ್ಕಂಥದ್ದರಲ್ಲಿ ಅನರ್ಹರು ಸೇರಿಕೊಂಡಿದ್ದಾರೆ ಅವರನ್ನೂ ತೆಗೆಯಬೇಕೆಂಬ ನಿರ್ಧಾರವನ್ನು ಸ್ವಾಗತಿಸುತ್ತೇನೆ. ಕಾರಣ ಅದು ಬಡವರಿಗೆ ಸರಿಯಾಗಿ ತಲುಪಬೇಕು. ಇಲ್ಲಿ ರೀ–ಸರ್ವೆನಲ್ಲಿ ಲೋಪವಾಗಿದೆ. ಈಗ ನಿಜವಾಗಿಯೂ ಅರ್ಹ ಫಲಾನುಭವಿಗಳ ಹೆಸರನ್ನು ಕೈಬಿಟ್ಟಿದ್ದಾರೆ. ಹೀಗಾಗಿ ಮಾಡಿರುವ ಕಾರ್ಡ್‌ಗಳನ್ನು ಹಂಚಲು ವಿಲೇಜ್ ಅಕೌಂಟೆಂಟ್‌ಗಳು ಪ್ರಯತ್ನ ಮಾಡಿದ್ದಾರೆ. ಇದು ಮಾನ್ಯ ಶ್ರೀನಿವಾಸಗೌಡರು ಹೇಳಿದ ಹಾಗೆ ಸ್ಥಳೀಯ ಶಾಸಕರುಗಳಿಗೆ ಗೊತ್ತಿಲ್ಲವಾಗಿದೆ. ಆದರೂ ಕೂಡ ಅನ್ಯಾಯವಾಗಿರತಕ್ಕಂಥ ಜನರು ಹಳ್ಳಿಗಳಲ್ಲಿ ಪ್ರತಿಭಟಿಸುತ್ತಿದ್ದಾರೆ. ಹಂಚಲು ಬಿಡುತ್ತಾ ಇಲ್ಲ. ಹಾಗೂ ವ್ಯವಸ್ಥೆಯನ್ನು ಸರಿಪಡಿಸಿ ಎಂದು ಹೇಳುತ್ತಾ ಇದ್ದಾರೆ. ಅದಕ್ಕೆ ಹೊಸದಾಗಿ ಏಕೆ ಅರ್ಜಿಗಳನ್ನು ತೆಗೆದುಕೊಳ್ಳಬೇಕು? ಈಗಾಗಲೇ ಹಸಿರುಕಾರ್ಡ್ ಹೋಲ್ಡ್‌ರ್‌ಗಳು ಯಾರಿದ್ದಾರೆ ಅವರಿಗೆ ಎಲ್ಲಿ ಅನ್ಯಾಯವಾಗಿದೆ, ಅದನ್ನು ಸರಿಪಡಿಸಿ. ಮತ್ತೆ ಅರ್ಜಿಗಳನ್ನು ಕೊಡಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ರಾಮಲಿಂಗಾರೆಡ್ಡಿ : ಆ ಸಂದರ್ಭದಲ್ಲಿ ಎಲ್ಲಾ ಕಡೆಗಳಿಂದ ಒತ್ತಾಯ ಬಂದಾಗ ಮಾನ್ಯ ಮುಖ್ಯಮಂತ್ರಿಯವರು ಇನ್ನೂ ಒಂದು ಅವಕಾಶವನ್ನು ಕೊಡೋಣ ಎಂದು ಹೇಳಿದ ಮೇರೆಗೆ ನಾವು ಮತ್ತೆ ಅರ್ಜಿಗಳನ್ನು ಕರೆದಿದ್ದೇವೆ. ಆ ಪ್ರಕಾರ ಸುಮಾರು 33 ಲಕ್ಷಗಳಷ್ಟು ಅರ್ಜಿಗಳು ಬಂದಿವೆ. ಅದರಲ್ಲಿ ಎಲಿಜಿಬಲ್ ಇರುವಂಥ ಎಲ್ಲರಿಗೂ ಕೊಡುವುದು ಎಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆ. ಆದ್ದರಿಂದ ಯಾರೂ ಆತಂಕ ಪಡುವ ಕಾರಣವಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಬಿಪಿಎಲ್ ಪಟ್ಟಿಯನ್ನು ಕಳೆದ ನಾಲ್ಕು ವರ್ಷಗಳಿಂದ ಮಾಡುತ್ತಾ ಇರುವುದು ನಮಗೆಲ್ಲರಿಗೂ ಗೊತ್ತಿದೆ. ತಮ್ಮ ಕ್ಷೇತ್ರದಲ್ಲಿ ಮತ್ತು ಇಡೀ ರಾಜ್ಯದಲ್ಲಿ ಈ ಬಗ್ಗೆ ಗೊಂದಲವಾಗಿದೆ. ಬಡವರಿಗೆ ಸರಕಾರದ ವಿವಿಧ ಯೋಜನೆಗಳ ಫಲ ಸಿಗುವುದು, ಬಿಪಿಎಲ್ ಪಟ್ಟಿಯ ಆಧಾರದ ಮೇಲೆ. ಅದರ ಮೇಲೆಯೇ ಬೇರೆ ಬೇರೆ ಸೌಲಭ್ಯಗಳನ್ನು ಕೊಡುವುದು ಮುಂತಾಗಿ ಇದೆ. ಆದರೆ ನಾಲ್ಕು ವರ್ಷಗಳಿಂದ ನಮಗೆ ಬಿಪಿಎಲ್ ಪಟ್ಟಿಯನ್ನು ಫೈನಲ್ ಮಾಡಲು ಆಗಲಿಲ್ಲ. ಒಂದು ಸಲ ಪಟ್ಟಿಯು ಫೈನಲ್ ಆಗಿ ಬಂತು ಎಂದು

ಅಂದುಕೊಂಡೆವು. ಬಂದುದಕ್ಕೆ ಮತ್ತೆ ಸ್ಟೇ ಆಯಿತು. ನಮ್ಮ ಕಡೆಯಲ್ಲಿ ಎಲ್ಲಿಯೂ ಹಂಚಿರಲಿಲ್ಲ. ಅದನ್ನಾದರೂ ಮೊದಲು ಹಂಚಲು ಕ್ರಮತೆಗೆದುಕೊಳ್ಳಬೇಕು. ನೀವು ಎಕ್ಸ್‌ಟೆನ್‌ಶನ್ ಮಾಡುವುದರಿಂದ ರಾಜ್ಯ ಮಟ್ಟದಲ್ಲಿ ಎಷ್ಟೋ ಲಕ್ಷ ಕಾರ್ಡಗಳು ಬಂದಿದೆ. ಅದನ್ನು ಫೈನಲ್ ಮಾಡುವುದಕ್ಕೆ ಮೊದಲು ಕೊಟ್ಟಿರುವುದನ್ನು ಕೊಡಿ...

ಅಧ್ಯಕ್ಷರು : ಫಲಾನುಭವಿಗಳು ಹೆಚ್ಚು ಹೆಚ್ಚು ಬಂದಾಗಲೆಲ್ಲಾ ಈ ರೀತಿ ಮುಂದೆ ಕಂಟಿನ್ಯೂ ಆಗುತ್ತಾ ಇರುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸರಕಾರದ ವಿವಿಧ ಯೋಜನೆಗಳು ಬಡವರಿಗೆ ತಲುಪಬೇಕೆಂದರೆ, ಬಡವರಲ್ಲಿ ಬಡವರಿಗೆ ತಲುಪಬೇಕಾದರೆ, ಇದನ್ನು ತತ್‌ಕ್ಷಣ ಹಂಚುವ ಕೆಲಸವಾಗಬೇಕಲ್ಲಾ? ಅದು ವಿಳಂಬವಾಗಬಾರದು. ಇದರಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಂದ ಹಿಡಿದು, ರೆವಿನ್ಯೂ ಇಲಾಖೆಯ ಅಧಿಕಾರಿಗಳು, ಗ್ರಾಮಪಂಚಾಯತ್ ಕಾರ್ಯದರ್ಶಿಗಳು ಮುಂತಾಗಿ ಎಲ್ಲರೂ ಸೇರಿ ಈ ಕೆಲಸವನ್ನು ಮಾಡುತ್ತಾ ಇದ್ದಾರೆ. ಅಂತಿಮವಾಗಿ ತಹಶೀಲ್ದಾರರು ಒಂದು ಪಟ್ಟಿಯನ್ನು ಪ್ರಕಟ ಮಾಡಲು ಕ್ರಮತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿಯೂ ಒಂದಷ್ಟು ಗೊಂದಲ. ಯಾರ್‍ಯಾರನೋ ಯಾರ್‍ಯಾರೋ ಉಪಯೋಗಿಸಿಕೊಂಡು ಪಟ್ಟಿಯಲ್ಲಿ ಹೆಸರುಗಳನ್ನು ಸೇರಿಸುತ್ತಿದ್ದಾರೆಂದು ಒಂದು ದೊಡ್ಡ ಗೊಂದಲವಾಗಿದೆ. ಎಷ್ಟೋ ದೊಡ್ಡ ದೊಡ್ಡ ಶ್ರೀಮಂತರುಗಳು ಬಿಪಿಎಲ್ ಪಟ್ಟಿಯಲ್ಲಿ ಸೇರುತ್ತಾ ಇದ್ದಾರೆ. ಹೀಗಾಗಿ ನಾಲ್ಕು ವರ್ಷಗಳಿಂದ ಬಡಜನರು ಗೊಂದಲದಲ್ಲಿದ್ದಾರೆ. ಆದ್ದರಿಂದ ಸರಕಾರದವರು ಈ ರೀತಿಯಾಗಿ ನಿರ್ಲಕ್ಷ ಮಾಡಬಾರದು, ತತ್‌ಕ್ಷಣ ಹಂಚಲು ಆದೇಶವನ್ನು ಕೊಡಬೇಕು.

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ಅನೇಕರು ಹೇಳಿದ ಹಾಗೆ ನಮ್ಮ ಭಾಗದಲ್ಲಿಯೂ ಕೂಡ ರೀ–ಸರ್ವೆ ಕೆಲಸ ನಡೆಯಿತು. ಜೂನ್ ಕೊನೆಯ ವರೆಗೆ ತಾವೇನೋ ಎಕ್ಸ್‌ಟೆನ್‌ಶನ್ ಕೊಟ್ಟಿದ್ದಿರಿ. ಬಡವರಿಗೆ ಮೊದಲು ಕೊಟ್ಟ ಹಳದಿ ಕಾರ್ಡಗಳನ್ನೆಲ್ಲ ನೀವು ತೆಗೆದುಕೊಂಡಿದ್ದೀರಿ. ಬೇರೆ ಒಳ್ಳೆಯ ಕಾರ್ಡ್ ಕೊಡುತ್ತೇವೆಂದು ಆಗ ಹೇಳಿದ್ದಾರೆ. ಈಗ ಅದೂ ಇಲ್ಲ. ಇದೂ ಇಲ್ಲ ಎಂಬಂತಾಗಿದೆ. ಇದನ್ನು ನಾವು 3–4 ತಿಂಗಳೂಗಳಿಂದ ಅಬ್‌ಸರ್ವ್ ಮಾಡುತ್ತಾ ಇದ್ದೇವೆ. ನಮ್ಮಲ್ಲಿ ಒಂದು ಗಾದೆ ಮಾತು ಇದೆ. "ಕಲ್ಲೂ ಹೋಯಿತು, ಕಲ್ಲಿಗೆ ಹತ್ತಿದ ಬೆಲ್ಲವೂ ಹೋಯಿತು" ಎಂಬ ಹಾಗೆ ಆಗಿದೆ. ಅದು ಇಲ್ಲ ಇದು ಇಲ್ಲ ಯಾವುದೂ ಇಲ್ಲದ ಸ್ಥಿತಿಯಲ್ಲಿ ಬಡವರಿದ್ದಾರೆ. ದಯವಿಟ್ಟು ಕೂಡಲೇ ಇದನ್ನು ಫೈನಲೈಸೇಶನ್ ಮಾಡಿ, ಯಾವ ಸರ್ವೆ ಮಾಡಿದ್ದೀರಿ ಅವರಿಗೆ ಕೊಡುವಂಥ ಕೆಲಸವನ್ನು ಮಾಡಿ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸೀಮೆಎಣ್ಣೆಯ ವಿಚಾರವನ್ನು ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಪ್ರಸ್ತಾಪ ಮಾಡಿದ್ದಾರೆ. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಹಾಲಿ ಇರತಕ್ಕಂಥ ಸೀಮೆಎಣ್ಣೆಯ ಕೂಪನ್‌ಗಳ ಸಂಖ್ಯೆ ಕಡಿಮೆಯಾಗಿದ್ದು ಜನರಿಗೆ ಸೀಮೆಎಣ್ಣೆಯ ವ್ಯವಸ್ಥೆಯಿದೆ ಬಹಳ ತೊಂದರೆಯಾಗಿದೆ. ಈ ಸೀಮೆಎಣ್ಣೆಯ ಕೂಪನ್‌ಗಳನ್ನು ಸರಕಾರದವರು ಕಡಿತ ಮಾಡಲು ಕಾರಣವೇನು? ಸೀಮೆಎಣ್ಣೆಯನ್ನು ಹಿಂದೆ ಇದ್ದಂಥ ಪದ್ಧತಿಯಲ್ಲಿ ಕೊಡಲು ಸರಕಾರದವರು ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ಈ ಹಳದಿ ಕಾರ್ಡಿನ ತೊಂದರೆಯು ಗ್ರಾಮೀಣಪ್ರದೇಶದಲ್ಲಿ ಬಹಳ ಆಗಿದೆ. ಈಗಾಗಲೇ ಹೇಳಿದ ಹಾಗೆ ಬಹಳಷ್ಟು ಅನರ್ಹರಿಗೆ ಈ ಹಳದಿ ಕಾರ್ಡನ್ನು ಕೊಡಲಾಗಿದೆ. ಒಂದು ಅಭಿಪ್ರಾಯ ಬಂದಿದೆ. ನಾವೇನು ಗ್ರಾಮಸಭೆಗಳನ್ನು ಮಾಡಿದಾಗ, ಕನಿಷ್ಟ ಇದ್ದಂಥ ಬಡವರಲ್ಲಿನ ಬಡವರ ಬಗ್ಗೆ ಅಲ್ಲಿ ಒಂದು ಒಟ್ಟಾಭಿಪ್ರಾಯ ಬರುತ್ತದೆ. ಆ ಅಭಿಪ್ರಾಯವನ್ನೇ ನಾವು ಯಥಾವತ್ತಾಗಿ ಕಳುಹಿಸಿದ್ದರೂ ಅದರ ಬಗ್ಗೆ ಮಾನ್ಯತೆ ಸಿಗದಂಥ ಪರಿಸ್ಥಿತಿಯು ವ್ಯವಸ್ಥೆಯಲ್ಲಿದೆ. ಗ್ರಾಮಸಭೆಯಲ್ಲಿ ಆಯ್ಕೆ ಮಾಡಿದಂಥ ಪಟ್ಟಿಯನ್ನು ಬಿಪಿಎಲ್‌ಗೆ ಒಳಪಟ್ಟ ಒಂದು ವ್ಯವಸ್ಥೆಯನ್ನು ಮಾಡಲಿಕ್ಕೆ ಒಂದು ಸುತ್ತೋಲೆಯನ್ನೋ ಇನ್ನಾವುದೋ ಒಂದು ಕ್ರಮವನ್ನು ತೆಗೆದುಕೊಂಡು ಸರ್ವೇ ಮಾಡುವುದು ಒಳ್ಳೆಯದೆಂಬುದು ನನ್ನ ಅಭಿಪ್ರಾಯ.

ಶ್ರೀ ಎಂ. ಭಕ್ರವತ್ಸಲಮ್ : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದ ಬಿಜಿಎಂಎಲ್‌ನ್ನು ಕ್ಲೋಸ್ ಮಾಡಿ 30 ತಿಂಗಳಾಯಿತು. ಅವರಿಗೆ 30 ತಿಂಗಳಿಂದ ರೇಶನ್ ಇಲ್ಲವಾಗಿದೆ. ಮೈನ್ಸ್‌ನಿಂದ ಮೂರು ಸೊಸೈಟಿಗಳಿದ್ದು ಅವುಗಳನ್ನು ಕ್ಲೋಸ್ ಮಾಡಿದ್ದಾರೆ. ಅವರಲ್ಲಿನ ನಾಲ್ಕು ಸಾವಿರ ಎಂಪ್ಲಾಯಿಸ್‌ಗೆ ರೇಶನ್ ಕಾರ್ಡ್ ಇದೆ. ಆದರೆ ಅವರಿಗೆ ಇವೊತ್ತಿನವರೆಗೂ ರೇಶನ್ ಸಪ್ಲೈ ಮಾಡಿರುವುದಿಲ್ಲ. ಅವರಿಗೆ ಹೊಸ ಕಾರ್ಡ್‌ಗಳನ್ನು ಕೊಡಬೇಕೆಂದು ನಾವು ಕೇಳಿದ್ದೆವು. ಒಮ್ಮೆ ನಮ್ಮ ಮಾನ್ಯ ಕಾಗೋಡು ತಿಮ್ಮಪ್ಪರವರು ಕೆ.ಜಿ.ಎಫ್‌ಗೆ ಬಂದರು. ಎಂಪ್ಲಾಯಿಸ್‌ಗಳ ಮುಂದೆ ಗ್ರೀನ್‌ಕಾರ್ಡ್ ಕೊಡುತ್ತೇವೆಂದು ಹೇಳಿಬಿಟ್ಟು ಬಂದರು. ಅದನ್ನು ಕೇಳಿ ಜನರು ಫಾರ್ಮ್‌ಗಳನ್ನು ಫಿಲ್‌ಅಪ್ ಮಾಡಿಕೊಟ್ಟಿದ್ದಾರೆ. ಸಚಿವರು ಹೇಳಿ ಹೋಗಿ ಎರಡು ವರ್ಷಗಳಾದರೂ ಇಲ್ಲಿಯ ತನಕವೂ ಒಂದು ರೇಶನ್ ಕಾರ್ಡ್‌ನ್ನು ಕೂಡ ಕೊಟ್ಟಿಲ್ಲ. ಅವರಿಗೆ ಕೆಲಸವೂ ಇಲ್ಲ, ಊಟವೂ ಇಲ್ಲ. ಕನಿಷ್ಟ ರೇಶನ್ ಕಾರ್ಡ್‌ನ್ನಾದರೂ ನಮ್ಮ ಸರ್ಕಾರ ಕೊಡುವುದು ಬೇಡವೇ? ನಾಲ್ಕು ಸಾವಿರ ಜನರೆಲ್ಲರೂ ಶೆಡ್ಯುಲ್ಡ್‌ಕಾಸ್ಟ್‌ನವರು. ಅವರು ಬಹಳ ಕಷ್ಟದಲ್ಲಿದ್ದಾರೆ. ಆದ್ದರಿಂದ ಬಿಜಿಎಂಎಲ್ ನೌಕರರಿಗೆ ರೇಶನ್ ಕಾರ್ಡ್‌ಗಳನ್ನು ಕೂಡಲೇ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೆ, ಇವೊತ್ತು ಕಾಫಿಬೀಜಕ್ಕೆ ಬೆಲೆ ಇಲ್ಲದ ಕಾರಣ ಕಾಫಿ ತೋಟದಲ್ಲಿಯೂ ಕೂಲಿ ಕೆಲಸವಿಲ್ಲ. ಆದ್ದರಿಂದ ಕಾಫಿ ತೋಟದ ಕೂಲಿ ಕಾರ್ಮಿಕರಿಗೆ ರೇಶನ್‌ಕಾರ್ಡಅನ್ನು ಕೊಡಬೇಕು. ಮತ್ತು ಈ ಬೆನಿಫೀಶಿಯರ್ಸ್‌ನ್ನು ಸೆಲೆಕ್ಷನ್ ಮಾಡುವುದನ್ನು ಕಂದಾಯ ಇಲಾಖೆಯವರಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನ್ಯಾಯಬೆಲೆ ಅಂಗಡಿಯವರಿಂದಲೂ ಅಪ್ಲಿಕೇಶನ್‌ಗಳನ್ನು ಕೊಡಲು ಏರ್ಪಾಡು ಮಾಡಿದ್ದಾರೆ. ಅದರಿಂದ ತೊಂದರೆಯಾಗುತ್ತಿದೆ ಅದನ್ನು ಕಂದಾಯ ಇಲಾಖೆಯವರಿಗೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ತರೀಕೆರೆ ತಾಲ್ಲೂಕಿಗೆ ಒಟ್ಟು 23000 ಕಾರ್ಡ್‌ಗಳನ್ನು ಕೊಟ್ಟಿದ್ದಾರೆ. ಆದರೆ ಹೆಚ್ಚುವರಿಯಾಗಿ 16000 ಕಾರ್ಡ್‌ಗಳು ಬೇಕೆಂದು ಅರ್ಜಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ನಮಗೆ ಎಷ್ಟು ಪರ್‌ಸೆಂಟ್ ಕಾರ್ಡ್‌ಗಳನ್ನು ಕೊಡುತ್ತೀರಿ ಎಂಬುದನ್ನೂ ಹೇಳಬೇಕು.

ಶ್ರೀ ಸಿ.ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, ಪ್ರಶ್ನೆಯನ್ನು ಕಟ್ಟಾ ಸುಬ್ರಮಣ್ಯ ನಾಯ್ಡುರವರು ಶಿವಾಜಿನಗರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕೇಳಿದ್ದಾರೆ. ಮಾನ್ಯ ನೀಲಕಂಠಪ್ಪನವರು

ತಮ್ಮ ಕ್ಷೇತ್ರದ ವಿಚಾರವನ್ನು ಕೇಳುತ್ತಿದ್ದಾರೆ. ಭಕ್ತವತ್ಸಲಂರವರು ಕೆ.ಜಿ.ಎಫ್. ವಿಚಾರವನ್ನು ಕೇಳುತ್ತಿದ್ದಾರೆ. ಹೀಗೆ ಎಲ್ಲರೂ ಕೇಳಿದರೆ ಸಚಿವರು ಉತ್ತರ ಕೊಡಲು ಸಾಧ್ಯವಾಗುತ್ತದೆಯೇ?

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ರಾಜ್ಯದಾದ್ಯಂಥ ಹೆಚ್ಚುವರಿ ಅರ್ಜಿಗಳನ್ನು ತೆಗೆದುಕೊಂಡಿದ್ದಾರೆ. ಹೀಗೆ ತೆಗೆದುಕೊಂಡಂಥ ಅರ್ಜಿಗಳಿಗೆ ಎಷ್ಟು ಪರ್‌ಸೆಂಟ್ ಮಾನ್ಯತೆಯನ್ನು ಕೊಡುತ್ತೀರಿ? ಅದರ ಬಗ್ಗೆ ಪುನರ್‌ಪರಿಶೀಲನೆ ಮಾಡುತ್ತೀರಾ? ಜನರು ತಾಲ್ಲೂಕು ಆಫೀಸ್‌ಗೆ ಪರದಾಡುವಂಥ ಪರಿಸ್ಥಿತಿಯಾಗಿದೆ. ಜನಪ್ರತಿನಿಧಿಗಳು ಯಾರೇ ಸಿಕ್ಕಿದರೂ ತಮಗೆ ಕಾರ್ಡ್ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೆ ಅಂತಿಮವಾಗಿ ತೆರೆ ಎಳೆಯಬೇಕಾದರೆ, ಕೊಡುತ್ತೇವೆ, ಅಥವಾ ಇಲ್ಲ ಎಂದು ಹೇಳುವುದು ಅಥವಾ ಇಷ್ಟು ಪರ್‌ಸೆಂಟ್ ಕೊಡುತ್ತೇವೆ ಎನ್ನುವುದು ಹಾಗೂ ಪುನರ್ ಪರಿಶೀಲನೆ ಮಾಡುತ್ತೇವೆಂದು ಸರ್ಕಾರ ಒಂದು ಸೂಚನೆಯನ್ನು ಕೊಟ್ಟರೆ ಅದನ್ನು ಕೇಳುತ್ತಾರೆ.

11.10 ಪಿ.ಎಂ.

ಇಲ್ಲದೇ ಇದ್ದರೆ ಎಂಎಲ್‌ಎಗಳು ಕ್ಷೇತ್ರಗಳಿಗೆ ಹೋದಾಗ ಅರ್ಜಿ ಕೊಡುತ್ತಾರೆ. ಮಂತ್ರಿಗಳು ಹೋದಾಗ ಅರ್ಜಿ ಕೊಡುತ್ತಾರೆ. ತಾವು ನಿರ್ದಿಷ್ಟವಾಗಿ ಇಲ್ಲ 10 ಪರ್ಸೆಂಟ್ ಕೊಡುತ್ತೇವೆ ಅಥವಾ 20 ಪರ್ಸೆಂಟ್ ಜಾಸ್ತಿ ಮಾಡುತ್ತೇವೆ ಎಂದು ಹೇಳಲಿ.

ಶ್ರೀ ಎ. ನಾರಾಯಣ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಶಾಸಕರ ಕಡೆಯಿಂದ ಈ ಹಳದಿ ಕಾರ್ಡ್‌ನ್ನು ವಿತರಣೆ ಮಾಡಬೇಕೆಂದು ಹೇಳಿದ್ದರು. ಮಾನ್ಯ ಸಿಂಧ್ಯಾರವರು ಶಾಸಕರನ್ನು ಎಳೆಯುವುದು ಬೇಡ ಜನ ಏಟು ಹಾಕುತ್ತಾರೆ ಅಂದರು ತಾವು ಒಂದು ಮಾತು ಹೇಳಿದಿರಿ. ಸಂಸತ್ಸದಸ್ಯರು ಜಿಲ್ಲಾಪಂಚಾಯ್ತಿ ಗ್ರಾಮಪಂಚಾಯ್ತಿ ಸದಸ್ಯರು ಕೊಡಲಿಯೆಂದು, ಹೀಗಾದರೆ ಸಂತೆಗೆ ಹೋಗಿಬಿಡುತ್ತೆ ರೇಷನ್ ಕಾರ್ಡ್‌ಗಳು, ಈಗಾಗಲೇ ನಡೆಯುತ್ತಿದೆ. ಪಂಚಾಯ್ತಿ ಮೆಂಬರೋ ನಿಮ್ಮ ಕಾರ್ಯಕರ್ತರೋ ಹಂಚುವುದು, ಅದು ಆಗಬಾರದು. ತಾಲ್ಲೂಕು ಕಚೇರಿಯಲ್ಲಿ ಹಂಚಿಕೆ ಆಗಬೇಕು. ಹೋಬಳಿ ಕಚೇರಿಗಳಲ್ಲಿ ನಾಡ ಕಚೇರಿಗಳಲ್ಲಿ ಆಗುವುದು ಸೂಕ್ತ. ಖಂಡಿತ · ಬದಲಾವಣೆ ಮಾಡಿ ಮಂತ್ರಿಗಳು ಆ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು.

ಶ್ರೀ ರಾಮಲಿಂಗಾರೆಡ್ಡಿ : ನಿಮ್ಮ ನೇತೃತ್ವದಲ್ಲಿ ಜಿಲ್ಲಾಪಂಚಾಯ್ತಿ ತಾಲ್ಲೂಕು ಮತ್ತು ಗ್ರಾಮಪಂಚಾಯ್ತಿ ಸದಸ್ಯರುಗಳ ಕಡೆಯಿಮದ ಹಂಚುವುದು ಅಂತ. ನಿಮ್ಮನ್ನು ಬಿಟ್ಟು ಗ್ರಾಮ ಪಂಚಾಯ್ತಿ ಅಧ್ಯಕ್ಷರ ಕಡೆಗೆ ಕೊಡುವುದಕ್ಕಾಗುತ್ತದಾ? ಇನ್ನು ಹಳದಿ ಕಾರ್ಡ್ ಬಗ್ಗೆ ನಮ್ಮ ಶಾಸಕ ಮಿತ್ರರೆಲ್ಲಾ ಪ್ರಶ್ನೆ ಕೇಳಿದ್ದಾರೆ. ಇದು ಸ್ವಲ್ಪ ತಡವಾಗಿದ್ದು ನಿಜ. ಹಿಂದೆ ಹೇಳಿದಂತೆ 4 ವರ್ಷಕ್ಕೆ ಮುಂಚೆ ಇದು ಪ್ರಾರಂಭವಾಯಿತು. ತಡವಾಗಿದೆ. ಮತ್ತೆ ಇದನ್ನು ಮುಂದಕ್ಕೆ ಹಾಕುವುದಿಲ್ಲ. ಏನು additional applications 33 ಲಕ್ಷ ಬಂದಿವೆ ಅದನ್ನೂ ಸೇರಿಸಿ ಅಕ್ಟೋಬರ್ 2ಕ್ಕೆ ಕೊಡಬೇಕೆಂದು ಮೊನ್ನೆ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆ. ಮತ್ತೆ ಈಗ 42 ಲಕ್ಷ ಏನಿದೆ computerization ಆಗಿರುವುದು ಇದನ್ನು ದಿನಾಂಕ 20.8.2003 ಕ್ಕಿಂತ ಮುಂಚೆ ನಾವು ಯಾವುದೇ ಕಾರಣಕ್ಕೂ ಕೊಡುವುದನ್ನು ನಿಲ್ಲಿಸುವುದಿಲ್ಲ. ಹಾಗೆ ಕೊಡದೇ ಇರುವುದಕ್ಕೆ ಕಾರಣ ಏನು ಅಂದರೆ ಸ್ವಲ್ಪ ತಡವಾಗಿದ್ದಕ್ಕೆ Revenue ಇಲಾಖೆಯವರದು ಕಾರಣ. ಇಲ್ಲಿ ನಾರಾಯಣಸ್ವಾಮಿ ಮತ್ತು ಬಬ್ಬರ್‌ಖಾನ್‌ರವರು ಒಂದು ಪ್ರಶ್ನೆ ಹಾಕಿದ್ದಾರೆ. ಆ Revenue ಇಲಾಖೆಯವರ cooperation ಸಿಗದಿದ್ದುದರಿಂದ ಇದರಲ್ಲಿ ತೊಂದರೆಯಾಯಿತು. ಈಗ ಅದು set right ಆಗುತ್ತದೆ ಮೊನ್ನೆ cabinet ನಲ್ಲಿ

ಕೂಡ ಈ ವಿಚಾರ ಮಾತನಾಡಿದೆ. ಮಾನ್ಯ ಮುಖ್ಯಮಂತ್ರಿಗಳು ಮುಖ್ಯ ಕಾರ್ಯದರ್ಶಿಗಳಿಗೆ ನಿರ್ದೇಶನ ಕೊಟ್ಟಿದ್ದಾರೆ. ನಾನು ಎಲ್ಲಾ ಸದಸ್ಯರ ಪ್ರಶ್ನೆಗೂ ಉತ್ತರಿಸುವೆನು. ಅಧ್ಯಕ್ಷರೇ, ಈ computerization ದೇಶದಲ್ಲೇ ಎಲ್ಲೂ ಇಲ್ಲ ಅನ್ನಿಸುತ್ತದೆ. ನಮ್ಮ ರಾಜ್ಯದಲ್ಲೇ ಪ್ರಥಮ ಅನ್ನಿಸುತ್ತದೆ ನಾವು computerized cards ಕೊಡುತ್ತಿರುವುದು ಎಲ್ಲಾ ಮಾಹಿತಿ ಸಮೇತ 20000 ಅಂಗಡಿಗಳಿವೆ ಮತ್ತು ಜಿಲ್ಲೆಗಳ ಎಲ್ಲಾ ಮಾಹಿತಿಯೂ ಇದರಲ್ಲಿ ಇರುತ್ತದೆ. ಇದು ಒಂದು ಲಾಭವಾಯಿತು. ಸ್ವಲ್ಪ ತಡವಾದರೂ ಕೂಡ ಒಂದು ಲಾಭ ನಮ್ಮ ರಾಜ್ಯಕ್ಕೆ ಆಗಿದೆ. ಮತ್ತೆ ಹಳದಿ ಕಾರ್ಡ್ ನಾವು ಎಲ್ಲೂ ವಾಪಸ್ ಪಡೆದಿಲ್ಲ. ಈಗೇನು 64 lakhs ಹಸಿರು ಕಾರ್ಡ್ ಇದೆ ಹಳದಿ ಕಾರ್ಡ್ ಸೇರಿಸಿ October 2 ರವರೆಗೂ ಎಲ್ಲಾ ಕಾರ್ಡ್‌ಗಳೂ ಹಾಗೇ ಇರುತ್ತವೆ. October 2 ರ ಮೇಲೆ ಹಳದಿ ಇರಬಹುದು ಹಸಿರು ಕಾರ್ಡ್ ಇರಬಹುದು ಹಿಂದೆ ಕೊಟ್ಟಿದ್ದು ಅವಕ್ಕೆ value ಇರುವುದಿಲ್ಲ. ಅಷ್ಟೇ. ಅಲ್ಲಿಯವರೆಗೂ ನಾವು ಯಾವುದೂ ವಾಪಸ್ ಪಡೆದಿಲ್ಲ. ಎರಡನೆಯದು BGML ಏರಿಯಾದ ಬಗ್ಗೆ ಕೇಳಿದರು, ಹಿಂದೆ BGML ನವರಿಗೆ 17000 ರೂ ಕ್ಕಿಂತ ಆದಾಯ ಜಾಸ್ತಿ ಇತ್ತು. ಅವರಿಗೆ ಕಾರ್ಡ್ ಕೊಡಲು ಬರುತ್ತಿರಲಿಲ್ಲ. ಈಗ factory ಮುಚ್ಚಿದೆ. ಅವರು applications ಹಾಕಿಕೊಳ್ಳಲಿ. ಅವರಿಗೆ ಆದಾಯ ಇಲ್ಲ ಅಂದರೆ, ಅವರಿಗೆ ಹಳದಿ ಕಾರ್ಡ್ ನಾವು ಕೊಟ್ಟೇಕೊಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ಮಾನ್ಯ ಭಕ್ತವತ್ಸಲಾ ಅವರಿಗೆ BGML ವಿಷಯ ಸರಿಯಾಗಿ ಹೇಳಲು ಬರಲಿಲ್ಲ. ಅಧ್ಯಕ್ಷರೂ ಅದನ್ನು ಹೇಳಬೇಕೆಂದಿದ್ದರು, ನಾನು ಹೇಳುತ್ತೇನೆ:

ಶ್ರೀ ರಾಮಲಿಂಗಾರೆಡ್ಡಿ : ನಾನು ಮುಗಿಸುತ್ತೇನೆ. ಅವರು employees ಆಗಿದ್ದಾಗ 17000 ರೂ ಕ್ಕಿಂತ ಆದಾಯ ಜಾಸ್ತಿ ಇತ್ತು, ನಮಗೆ ಕೊಡಲು ಬರುತ್ತಿರಲಿಲ್ಲ. ಈಗ ಅವರಿಗೆ ಕೆಲಸ ಇಲ್ಲ. 17000 ರೂ ಕ್ಕಿಂತ income ಕಮ್ಮಿ ಇದ್ದರೆ ರೇಷನ್‌ಕಾರ್ಡ್ ಬೇಕೆಂದು ಅಪ್ಲೈ ಮಾಡಿಕೊಳ್ಳಲಿ, ಅದೇ ರೀತಿ coffee estates ನಲ್ಲಿ ಕೆಲಸ ಮಾಡುತ್ತಾರಲ್ಲಾ ಅವರಿಗೂ ಕೂಡ ಕೊಡಬೇಕೆಂದು ಮಾನ್ಯ ಚಂದ್ರೇಗೌಡರು ಮೋಟಮ್ಮನವರು ನನ್ನ ಕೂಡ ಮಾತನಾಡಿದ್ದಾರೆ. ಅವರಿಗೂ 12000 ರೂ ಕ್ಕಿಂತ ಆದಾಯ ಕಡಿಮೆ ಇದ್ದರೆ ಅವರಿಗೂ ಕೊಡುತ್ತೇವೆ. Eligible ಇರುವ ಎಲ್ಲರಿಗೂ ಕೊಡಬೇಕೆಂದು cabinet ನಲ್ಲಿ ತೀರ್ಮಾನವಾಗಿದೆ. ಗ್ರಾಮಾಂತರದಲ್ಲಿ 12000 ರೂ ಕ್ಕಿಂತ ಆದಾಯ ಕಡಿಮೆ ನಗರ ಪ್ರದೇಶದಲ್ಲಿ 17000 ರೂ ಕ್ಕಿಂತ ಆದಾಯ ಕಡಿಮೆ, BGML ನವರೂ ಹಾಕಿಕೊಳ್ಳಲಿ, coffee workers ಹಾಕಿಕೊಳ್ಳಲಿ, fishermen ಹಾಕಿಕೊಳ್ಳಲಿ ನೇಯ್ಗೆಯವರು ಹಾಕಿಕೊಳ್ಳಲಿ, ಎಲ್ಲರೂ ಹಾಕಿಕೊಳ್ಳಲಿ, ಯಾರದೇನು ಅಭ್ಯಂತರವಿಲ್ಲ. ಮತ್ತೆ ನಮ್ಮ ಮಾನ್ಯ ಆತ್ಮಾನಂದರವರು ಒಂದು ಪ್ರಶ್ನೆ ಕೇಳಿದರು. ಕೂಪನ್ಸ್ ಬಗ್ಗೆ. ಆ Circular ಕೊಟ್ಟಿರುವುದು ನಿಜ, gas connections ಇರುವವರಿಗೆ, ಸೀಮೆಎಣ್ಣೆ ಪ್ರಮಾಣ ಪ್ರತಿ ವರ್ಷವರ್ಷ ಕೇಂದ್ರದಿಂದ ನಮಗೆ ಕಡಿಮೆಯಾಗುತ್ತಿದೆ. ಇಲ್ಲಿ ನಾವೇನು ಮಾಡುತ್ತೇವೆ? ಗ್ಯಾಸ್ ಇದ್ದವರಿಗೆ ಸೀಮೆಎಣ್ಣೆ ಕೊಡಬಾರದು ಅಂತ, Bangalore ನಲ್ಲಿ 10 lakhs gas connections ಇರುತ್ತದೆ. ಆದರೆ Identify ಆಗಿರುವುದು ಆದರೆ identify 5 lakhs. ಅಂತಹ ಕಡೆ ನಾವು ಕೂಪನ್‌ಗಳನ್ನು ಕಡಿಮೆ ಕೊಟ್ಟಿದ್ದೇವೆ. ಮೊನ್ನೆ ಮಾನ್ಯ ಆತ್ಮಾನಂದರು ಬಂದಿದ್ದರು, ನಾನು ಕರೆದು ಮಾತನಾಡುತ್ತೇನೆ ಅಂತ ಹೇಳಿದ್ದೇನೆ. ಮೊನ್ನೆ ಧಾರವಾಡಕ್ಕೆ ಹೋದಾಗಲೂ ಇದೇ ಪ್ರಶ್ನೆ ಬಂತು, ಮತ್ತು ಮೈಸೂರಿನವರೂ

ಮೊನ್ನೆ ಬಂದಿದ್ದು ವಿಶ್ವನಾಥ್‌ರವರು ನನ್ನ ಕೂಡ ಮಾತನಾಡಿದರು. ಏನಾದರೂ problems ಇದ್ದರೆ ಅವನ್ನು ಮಾತನಾಡಿ ಪರಿಹಾರ ಮಾಡೋಣ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಶ್ರೀ ಮಹಾಲಿಂಗಪ್ಪ ಅವರು ಇಲ್ಲ, ಆಸ್ಪತ್ರೆಯಲ್ಲಿರಬಹುದು. ಅವರ ಪ್ರಶ್ನೆಗೆ ಹೆಚ್.ಕೆ. ಪಾಟೀಲರು ಬಂದ ಮೇಲೆ ಉತ್ತರ ಅವರಿಗೆ ಆ House ನಲ್ಲಿ ಕೆಲಸ ಇದೆ. ಅವರು ಬರುತ್ತಾರೆ. Sorry ಕೃಷ್ಣಮೂರ್ತಿಯವರೇ, ನಿಮ್ಮ ಪ್ರಶ್ನೆಯನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ವರ್ಗಾಯಿಸಲಾಗಿದೆ.

ಶ್ರೀ ಬಿ. ಸೋಮಶೇಖರ್ : ವರ್ಗಾವಣೆ ಯಾಕೆ ಮಾಡಬೇಕು? ಸಂಬಂಧಪಟ್ಟ ಸಚಿವರಿಗೆ ಕೊಟ್ಟ ಮೇಲೆ ವರ್ಗಾವಣೆ ಏಕೆ?

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ ಇಂತಹ ಇಲಾಖೆ ಅಂತ ನಿಮಗೆ ಗೊತ್ತಿದ್ದರೆ ಮೇಲೆ ಬರದೇ ಬಿಡಿ.

ಶ್ರೀ ಬಿ. ಸೋಮಶೇಖರ್ : ಅದು ಸರ್ಕಾರದ ಜವಾಬ್ದಾರಿ ಸಂಬಂಧಪಟ್ಟ ಇಲಾಖೆಗೆ ಕಳುಹಿಸಿ ಉತ್ತರ ತರಿಸಬೇಕಾಗುತ್ತದೆ ಅವರು.

ಅಧ್ಯಕ್ಷರು : ನಮ್ಮ Secretariat ನವರೂ ತಪ್ಪು ಮಾಡುತ್ತಾರೆ ಇಲ್ಲ ಅಂತ ಅಲ್ಲ. ಕೃಷ್ಣಮೂರ್ತಿಗಳೇ ಬೆಳೆ ವಿಮೆ ಬಗ್ಗೆ ಬಂದಿರುವುದು, by mistake ಯಾವುದೋ ಇಲಾಖೆಗೆ ಹೋಗಿರುತ್ತದೆ.

ಶ್ರೀ ಎ.ಆರ್. ಕೃಷ್ಣಮೂರ್ತಿ : ನಾನು ಕೃಷಿ ಸಚಿವರನ್ನೇ ಕೇಳಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಕೃಷ್ಣಮೂರ್ತಿಯವರ ಅದೃಷ್ಟ ಎಷ್ಟು ಚೆನ್ನಾಗಿದೆ ಅಂತ ಹೇಳಿದರೆ ಈ ಸದನದಲ್ಲಿ ಅವರ ಮೂರು ಪ್ರಶ್ನೆಗಳು ಬ್ಯಾಲೆಟ್‌ನಲ್ಲಿ ಎದ್ದರೂ ಇಲ್ಲಿಗೆ ಬಂದರೂ ಮೂರಕ್ಕು ಉತ್ತರ ಇಲ್ಲ ಅಂದರೆ ಅವರ ಕ್ಷೇತ್ರದ ಜನತೆಗೆ ಏನು ಸಂತೋಷವಾಗುತ್ತದೆ. ಕಾರಣಗಳೇನೇ ಇರಬಹುದು, ಈ ಬಾರಿ ಸದನದಲ್ಲಿ ಯಾವ ಪರಿಸ್ಥಿತಿ ಬಂತು ಅಂದರೆ ಮಾನ್ಯ ಹಿರಿಯ ಮಂತ್ರಿಗಳಿದ್ದೀರಿ, ದಯವಿಟ್ಟು ಯೋಚನೆ ಮಾಡಿ, ಚಂದ್ರೇಗೌಡರು ಮಾನ್ಯ ಅಧ್ಯಕ್ಷರಿಗೆ ಹೇಳುತ್ತಾರೆ ಯಾವ್ಯಾವ ಪ್ರಶ್ನೆಗೆ answer ಬೇಕು ಅಂತ Speaker ಇವರಿಗೆ ಬರೆದು ಕಳಿಸಬೇಕಂತೆ. ಆ ಮಟ್ಟಕ್ಕೆ ಹೋಗಿದೆ ಸರ್ಕಾರದವರಿಗೆ ಇದು ಗೊತ್ತಾಗುವುದಿಲ್ಲವಾ? ಕಣ್ಣುಕಿವಿ ಇಲ್ಲವಾ? ಮರೆವು ಜಾಸ್ತಿಯಾಗಿದೆಯಾ? ಏನ್ಸಾರ್ ಇದು?

ಅಧ್ಯಕ್ಷರು : ಸಂಬಂಧಪಟ್ಟ ಮಂತ್ರಿಗಳಿಗೆ ಕೂಡಲೇ ಕಳುಹಿಸಿರುತ್ತೇವೆ. ಅದ್ಯಾವಾಗ ಹೇಳಿದರೋ ನನಗೆ ಗೊತ್ತಿಲ್ಲ. ಆಯಿತು ಕೃಷ್ಣಮೂರ್ತಿಗಳೇ ನಿಮ್ಮದು ನೆಕ್ಸ್ಟ್ ಮುಂದಿನ ಶುಕ್ರವಾರ.

ಸಹಕಾರ ಬ್ಯಾಂಕುಗಳಿಂದ ಕೃಷಿ ಮತ್ತು ಕೃಷಿಯೇತರ ಬಾಬುಗಳಿಗೆ ಸಾಲ ನೀಡಿಕೆ

407 (3965) ಡಾ: ನಾರಾಯಣಪ್ಪ ಬಿ.ಡಿ (ಹೊಸನಗರ) ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ನೀಡಿದ ಸಾಲದ ಮೊತ್ತವೆಷ್ಟು (ದಿನಾಂಕ: 31.3.2003 ರವರೆಗೆ ಇದ್ದಂತೆ)

ಆ) ರಾಜ್ಯದಲ್ಲಿನ ಪಿ.ಎಲ್.ಡಿ.ಬಿ. ಅರ್ಬನ್ ಬ್ಯಾಂಕ್‌ಗಳು ಮತ್ತಿತರ ಸಂಸ್ಥೆಗಳು ಕೃಷಿ ಮತ್ತು ಕೃಷಿಯೇತರ ಚಟುವಟಿಗಳಿಗೆ ನೀಡಿದ ಸಾಲದ ಮೊತ್ತವೆಷ್ಟು (ದಿನಾಂಕ 31.3.2002 ರವರೆಗೆ ಇದ್ದಂತೆ)